All India Radio: Bangalore
National Bulletin In Kannada
11.01.2026  19.35 p.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ದೇಶ ವಿಭಜಿಸುವ ಶಕ್ತಿಗಳ ವಿರುದ್ಧ ಏಕತೆಯಿಂದಿರಲು ನಾಗರಿಕರಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಕರೆ
- ಜನಕೇಂದ್ರೀತ ಇಂಧನ ಪರಿವರ್ತನೆಯ ಬಗ್ಗೆ ಭಾರತ ಬದ್ಧ - ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ
- ಪಿಎಸ್‌ಎಲ್‌ವಿ-ಸಿ೬೨ ಮಿಷನ್ ನಾಳೆ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಉಡಾವಣೆ
- ಮಹಿಳಾ ಪ್ರೀಮಿಯರ್ ಲೀಗ್ ಟಿ-೨೦ ಕ್ರಿಕೆಟ್; ನಾಲ್ಕನೇ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ವಿರುದ್ಧ ಟಾಸ್ ಗೆದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಫೀಲ್ಡಿಂಗ್ ಆಯ್ಕೆ

*****************

ದೇಶವನ್ನು ವಿಭಜಿಸುವ ಸಂಚು ರೂಪಿಸುವ ಎಲ್ಲ ಶಕ್ತಿಗಳನ್ನು ಸೋಲಿಸಲು ನಾಗರಿಕರು ಏಕತೆಯಿಂದ ಇರಬೇಕೆಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ಇಂದು ಗುಜರಾತ್‌ನ ಪ್ರಭಾಸ್ ಪಟನ್‌ನಲ್ಲಿ ಆಯೋಜಿಸಲಾದ ಸೋಮನಾಥ ಸ್ವಾಭಿಮಾನ ಪರ್ವದ ಸಂದರ್ಭದಲ್ಲಿ ಭಾರೀ ಜನಸಮೂಹವನ್ನು ಉದ್ದೇಶಿಸಿ ಮಾತನಾಡಿದ ಅವರು, ವಿಕಸಿತ ಭಾರತದ ಗುರಿಗಾಗಿ ಭುಜಕ್ಕೆ ಭುಜಕ್ಕೆ ಸೇರಿಸಿ ಹೃದಂiಕ್ಕೆ ಹೃದಯ ಸೇರಿಸಿ ಮುಂದೆ ಸಾಗಬೇಕೆಂದು, ಜೊತೆಗೆ ನಮ್ಮ ಭೂತಕಾಲದೊಂದಿಗೆ ಭಾವನಾತ್ಮಕ ಸಂಬಂಧ ಉಳಿಸಿಕೊಳ್ಳಬೇಕೆಂದು ಮನವಿ ಮಾಡಿದರು.

ಸೋಮನಾಥ ಸ್ವಾಭಿಮಾನ ಪರ್ವವನ್ನು ಶಾಶ್ವತ ನಂಬಿಕೆ ಮತ್ತು ಭಕ್ತಿಯ ಜೀವಂತ ಪ್ರತಿಬಿಂಬವೆಂದು ವರ್ಣಿಸಿದ ಅವರು, ಈ ಉತ್ಸವವು ಕೇವಲ ಐತಿಹಾಸಿಕ ವೈಭವದ ಆಚರಣೆಯಲ್ಲ, ಭವಿಷ್ಯದ ಪೀಳಿಗೆಗಾಗಿ ಸೋಮನಾಥ ದೇವಸ್ಥಾನದ ಕಾಲಾತೀತ ಪಯಣವನ್ನು ಜೀವಂತವಾಗಿರಿಸುವ ಮಹತ್ವದ ಅವಕಾಶವಾಗಿದೆ ಎಂದು ಹೇಳಿದರು.

ಭಾರತೀಯ ನಾಗರಿಕತೆಯ ಮೌಲ್ಯಗಳನ್ನು ಒತ್ತಿ ಹೇಳಿದ ಅವರು, ನಮ್ಮ ನಾಗರಿಕತೆ ಇತರರನ್ನು ಸೋಲಿಸಲು ಕಲಿಸುವುದಿಲ್ಲ, ಬದಲಾಗಿ ಸಮತೋಲನಯುತ ಜೀವನವನ್ನು ನಡೆಸಲು ಬೋಧಿಸುತ್ತದೆ. ಸೋಮನಾಥದಲ್ಲಿ ಅಡಕವಾಗಿರುವುದು ನಂಬಿಕೆ. ದ್ವೇಷ ಅಥವಾ ವಿನಾಶದ ಸಂದೇಶವಲ್ಲ. ಅದು ಪ್ರೀತಿಯ ಸಂದೇಶವನ್ನು ಸಾರುತ್ತಿದೆ ಎಂದು ಅವರು ಹೇಳಿದರು.

ಘಜ್ನಿಯಿಂದ ಔರಂಗಜೇಬನ ಕಾಲದವರೆಗೆ ನಡೆದ ಅನೇಕ ಆಕ್ರಮಣಗಳ ಬಳಿಕವೂ ದೇವಸ್ಥಾನವು ಹೇಗೆ ಪುನರುತ್ಥಾನಗೊಂಡು ಮರುನಿರ್ಮಾಣಗೊಂಡಿತು ಎಂಬ ಐತಿಹಾಸಿಕ ಪಯಣವನ್ನು ಸ್ಮರಿಸಿದ ಪ್ರಧಾನಮಂತ್ರಿ ಮೋದಿ, ಧಾರ್ಮಿಕ ಉಗ್ರತೆಯ ಮನೋಭಾವವು ಇತಿಹಾಸದಲ್ಲಿ ಈ ಆಕ್ರಮಣಗಳನ್ನು ಸಾಮಾನ್ಯ ಲೂಟಿಯಂತೆ ಕುಗ್ಗಿಸಿ ಬಿಂಬಿಸಿದ್ದು, ದೇವಸ್ಥಾನವನ್ನು ರಕ್ಷಿಸಲು ತಮ್ಮ ಜೀವಗಳನ್ನು ತ್ಯಾಗ ಮಾಡಿದವರ ಕಥೆಗಳು ಇತಿಹಾಸದಲ್ಲಿ ಸ್ಥಾನ ಪಡೆಯಲಿಲ್ಲವೆಂದು ವಿಷಾದ ವ್ಯಕ್ತಪಡಿಸಿದರು.

*****************

ರಾಜ್ಕೋಟ್‌ನ ಮಾರ್ವಾಡಿ ವಿಶ್ವವಿದ್ಯಾಲಯದಲ್ಲಿ ಕಚ್ ಮತ್ತು ಸೌರಾಷ್ಟ್ರ ಪ್ರದೇಶಗಳಿಗಾಗಿ ಆಯೋಜಿಸಲಾದ ಎರಡು ದಿನಗಳ ವೈಬ್ರಂಟ್ ಗುಜರಾತ್ ಪ್ರಾದೇಶಿಕ ಸಮ್ಮೇಳನವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಇಂದು ಉದ್ಘಾಟಿಸಿದರು.

ಈ ಸಮ್ಮೇಳನವು ಸೌರಾಷ್ಟ್ರ ಮತ್ತು ಕಚ್‌ನ ಪಶ್ಚಿಮ ಭಾಗದ ೧೨ ಜಿಲ್ಲೆಗಳಲ್ಲಿ ಹೂಡಿಕೆ, ನಾವಿನ್ಯತೆ ಮತ್ತು ಅಭಿವೃದ್ಧಿಗೆ ಉತ್ತೇಜನ ನೀಡುವ ಉದ್ದೇಶ ಹೊಂದಿದೆ.

ಈ ಸಂದರ್ಭದಲ್ಲಿ ಪ್ರಧಾನಮಂತ್ರಿ ಅವರು, ಸೌರಾಷ್ಟ್ರದ ಏಳು ಜಿಲ್ಲೆಗಳಾದ್ಯಂತ ೧೩ ಹೊಸ ಗ್ರೀನ್‌ಫೀಲ್ಡ್ ಸ್ಮಾರ್ಟ್ ಕೈಗಾರಿಕಾ ಎಸ್ಟೇಟ್‌ಗಳನ್ನು ವರ್ಚುವಲ್ ಮೂಲಕ ಉದ್ಘಾಟಿಸಿದರು. ಜೊತೆಗೆ ರಾಜ್ಕೋಟ್‌ನಲ್ಲಿ ವಿಶೇಷ ವೈದ್ಯಕೀಯ ಉಪಕರಣಗಳ ಸಮುಚ್ಚಯವನ್ನು ಉದ್ಘಾಟಿಸಿದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಇಂದು ವೈಬ್ರಂಟ್ ಗುಜರಾತ್ ಶೃಂಗಸಭೆ, ಜಾಗತಿಕ ಬೆಳವಣಿಗೆ, ಅಂತಾರಾಷ್ಟ್ರೀಯ ಸಹಕಾರ ಮತ್ತು ಪಾಲುದಾರಿಕೆಗಳಿಗೆ ಬಲಿಷ್ಠ ವೇದಿಕೆಯಾಗಿ ರೂಪುಗೊಂಡಿದೆ. ಆರಂಭಿಕ ಹಂತದಲ್ಲಿ ಗುಜರಾತ್‌ನ ಸಾಮರ್ಥ್ಯವನ್ನು ಜಗತ್ತಿಗೆ ಪರಿಚಯಿಸುವುದೇ ಶೃಂಗಸಭೆಯ ಗುರಿಯಾಗಿತ್ತು. ಜನರು ಗುಜರಾತ್‌ಗೆ ಬಂದು ಇಲ್ಲಿ ಹೂಡಿಕೆ ಮಾಡಬೇಕು ಮತ್ತು ಅದರಿಂದ ಭಾರತಕ್ಕೂ ಲಾಭವಾಗಬೇಕು ಎಂಬ ಉದ್ದೇಶವಾಗಿದ್ದು, ಜೊತೆಗೆ ಜಗತ್ತಿನ ಹೂಡಿಕೆದಾರರು ಕೂಡ ಇದರ ಪ್ರಯೋಜನ ಪಡೆಯಬೇಕೆಂಬುದು ನಿರೀಕ್ಷೆಯಾಗಿತ್ತು.

*****************

ಯುಎಇ ರಾಷ್ಟ್ರದ ಅಬುಧಾಬಿಯಲ್ಲಿಂದು ನಡೆದ ಅಂತಾರಾಷ್ಟ್ರೀಯ ಮರುಬಳಕೆ ಇಂಧನ ಸಂಸ್ಥೆಯ ೧೬ನೇ ಸಮಾವೇಶದಲ್ಲಿ ಕೇಂದ್ರ ಮರುಬಳಕೆ ಇಂಧನ ಖಾತೆ ಸಚಿವ ಪ್ರಲ್ಹಾದ ಜೋಶಿ ಪಾಲ್ಗೊಂಡರು.

ಇಂಧನ ಭವಿಷ್ಯವನ್ನು ಮರುರೂಪಿಸುವ ವಿಷಯದ ಕುರಿತಂತೆ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಅವರು, ಜಾಗತಿಕ ಇಂಧನ ಪರಿವರ್ತನೆಯು ಶುದ್ಧ ಹಾಗೂ ಸುಲಭವಾಗಿ ಕೈಗೆಟುಕುವ ಮೂಲಗಳಿಂದ ಸಾಧ್ಯವಾಗಬೇಕು ಎನ್ನುವ ಭಾರತದ ನಿಲುವನ್ನು ಪ್ರಸ್ತುತಪಡಿಸಿದರು.

ಈ ಕುರಿತು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಸಚಿವ ಪ್ರಲ್ಹಾದ ಜೋಶಿ ಮಾಹಿತಿ ಹಂಚಿಕೊಂಡಿದ್ದು, ಭಾರತ ಎಲ್ಲರನ್ನೂ ಒಳಗೊಳ್ಳುವ ವಿಕಾಸ ಮತ್ತು ವಸುಧೈವ ಕುಟುಂಬಂ ಎನ್ನುವ ಧ್ಯೇಯದಲ್ಲಿ ನಂಬಿಕೆ ಇಟ್ಟಿದೆ. ಅಭಿವೃದ್ಧಿಯ ಫಲವನ್ನು ಎಲ್ಲರಿಗೂ ತಲುಪಿಸಲು ಜನಕೇಂದ್ರಿತ ಇಂಧನ ಪರಿವರ್ತನೆಯ ಬಗ್ಗೆ ಬದ್ಧತೆ ಹೊಂದಿದೆ. ಹಣಕಾಸು, ತಂತ್ರಜ್ಞಾನ ಮತ್ತು ಆಡಳಿತದಲ್ಲಿ ಅಂತಾರಾಷ್ಟ್ರೀಯ ಸಹಕಾರದಿಂದ ಪರಿವರ್ತನೆ ಸಾಧ್ಯವಾಗಲಿದೆ ಎಂದು ತಿಳಿಸಿದರು.

*****************

ಪಿಎಸ್‌ಎಲ್‌ವಿ-ಸಿ೬೨ ಮಿಷನ್ ನಾಳೆ ಬೆಳಿಗ್ಗೆ ೧೦ ಗಂಟೆ ೧೭ ನಿಮಿಷಕ್ಕೆ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಮೊದಲ ಉಡಾವಣಾ ವೇದಿಕೆಯಿಂದ ಉಡಾವಣೆ ಆಗಲಿದೆ ಎಂದು ಇಸ್ರೋ ಮೂಲಗಳು ತಿಳಿಸಿವೆ.

ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ ಕೈಗೊಂಡಿರುವ ೯ನೇ ವಿಶೇಷ ವಾಣಿಜ್ಯ ಮಿಷನ್ ಇದಾಗಿದ್ದು, ಬಳಕೆದಾರರಿಗಾಗಿ ಇಒಎಸ್-ಎನ್೧ ಭೂಪರಿವೀಕ್ಷಣಾ ಉಪಗ್ರಹವನ್ನು ನಿರ್ಮಿಸಿ ಉಡಾವಣೆ ಮಾಡುವುದರ ಜೊತೆಗೆ, ದೇಶೀಯ ಹಾಗೂ ಅಂತಾರಾಷ್ಟ್ರೀಯ ಗ್ರಾಹಕರ ೧೫ ಸಹ-ಪ್ರಯಾಣಿಕ ಉಪಗ್ರಹಗಳಿಗೆ ಉಡಾವಣೆ ಸೇವೆಗಳನ್ನು ಒದಗಿಸಲಾಗುತ್ತದೆ.

ಉಡಾವಣಾ ವಾಹನ ಮತ್ತು ಉಪಗ್ರಹಗಳ ಏಕೀಕರಣ ಕಾರ್ಯ ಪೂರ್ಣಗೊಂಡಿದ್ದು, ಉಡಾವಣೆಗೆ ಮುನ್ನದ ಪರಿಶೀಲನೆಗಳು ಪ್ರಗತಿಯಲ್ಲಿ ಇವೆ. ಪಿಎಸ್‌ಎಲ್‌ವಿ ಇಸ್ರೋದ ವಿಶ್ವಾಸಾರ್ಹ ಕಾರ್ಯನಿರ್ವಹಣಾ ಉಡಾವಣೆ ವಾಹನವಾಗಿದ್ದು, ಚಂದ್ರಯಾನ್-೧, ಮಂಗಳಯಾನ, ಆದಿತ್ಯ-ಎಲ್೧ ಮತ್ತು ಆಸ್ಟ್ರೋಸ್ಯಾಟ್ ಮುಂತಾದ ಪ್ರಮುಖ ಮಿಷನ್‌ಗಳನ್ನು ಒಳಗೊಂಡಂತೆ ಇದುವರೆಗೆ ೬೩ ಹಾರಾಟಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ೨೦೧೭ರಲ್ಲಿ ಪಿಎಸ್‌ಎಲ್‌ವಿ ಒಂದೇ ಮಿಷನ್‌ನಲ್ಲಿ ೧೦೪ ಉಪಗ್ರಹಗಳನ್ನು ಉಡಾವಣೆ ಮಾಡುವ ಮೂಲಕ ವಿಶ್ವ ದಾಖಲೆ ನಿರ್ಮಿಸಿತು.

*****************

ಮುಂದಿನ ಕೇರಳ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು, ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ತಿರುವನಂತಪುರದಲ್ಲಿ "ಮಿಷನ್ ೨೦೨೬" ಗೆ ಚಾಲನೆ ನೀಡಿದರು.

ಕೌಡಿಯಾರ್‌ನ ಉದ್ಯಾಯ್ ಪ್ಯಾಲೆಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆದ ಸ್ಥಳೀಯ ಸಂಸ್ಥೆಗಳಿಗೆ ಆಯ್ಕೆಯಾದ ಬಿಜೆಪಿ ಸದಸ್ಯರ ರಾಜ್ಯ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಅವರು, ವಿಕಸಿತ ಕೇರಳ ನಿರ್ಮಾಣದತ್ತ ಬಿಜೆಪಿ ಕಾರ್ಯನಿರ್ವಹಿಸುತ್ತಿದ್ದು, ಆ ಗುರಿ ಸಾಧಿಸಲು ರಾಜ್ಯದಲ್ಲಿ ಬಿಜೆಪಿ ಸರ್ಕಾರ ರಚಿಸುವ ಉದ್ದೇಶ ಹೊಂದಿದೆ ಎಂದು ಹೇಳಿದರು. ವಿಕಸಿತ ಭಾರತದ ದಾರಿ ವಿಕಸಿತ ಕೇರಳದ ಮೂಲಕವೇ ಸಾಗುತ್ತದೆ ಎಂದೂ ಅವರು ಹೇಳಿದರು.

ಶಬರಿಮಲೆ ಚಿನ್ನದ ವಿವಾದ ಪ್ರಕರಣವನ್ನು ಉಲ್ಲೇಖಿಸಿದ ಅಮಿತ್ ಶಾ ಅವರು, ಜನರ ಮನಸ್ಸಿನಲ್ಲಿ ಇಬ್ಬರು ಸಚಿವರು ತಪ್ಪಿತಸ್ಥರಾಗಿದ್ದಾರೆ ಮತ್ತು ಈ ವಿಷಯದಲ್ಲಿ ಅವರು ತಟಸ್ಥ ತನಿಖೆ ನಡೆಸಲು ಸಾಧ್ಯವಿಲ್ಲ. ಶಬರಿಮಲೆ ಆಸ್ತಿಗಳನ್ನು ರಕ್ಷಿಸಲು ಅಸಮರ್ಥರಾದವರು ನಮ್ಮ ನಂಬಿಕೆಯನ್ನು ಕೂಡ ರಕ್ಷಿಸಲು ಸಾಧ್ಯವಿಲ್ಲ. ಈ ವಿಷಯದ ಬಗ್ಗೆ ಇಡೀ ದೇಶವೇ ಚಿಂತಿತವಾಗಿದೆ ಎಂದರು.

*****************

ಜರ್ಮನಿಯ ಫೆಡರಲ್ ಚಾನ್ಸಲರ್ ಫೆಡ್ರಿಕ್ ಮೆರ್ಜ್ ಎರಡು ದಿನಗಳ ಭಾರತ ಭೇಟಿಗಾಗಿ ನಾಳೆ ಆಗಮಿಸಲಿದ್ದಾರೆ.

ಅವರು ಮೊದಲ ಹಂತದಲ್ಲಿ ಗುಜರಾತ್‌ನ ಸಬರಮತಿ ಆಶ್ರಮಕ್ಕೆ ಭೇಟಿ ನೀಡಿ, ಗೌರವ ಸಮರ್ಪಣೆ ಮಾಡಲಿದ್ದಾರೆ.

ನಂತರ ಉಭಯ ದೇಶಗಳ ಸಾಂಸ್ಕೃತಿಕ ಸಂಬಂಧಗಳನ್ನು ಪ್ರತಿಬಿಂಬಿಸುವ ಅಂತಾರಾಷ್ಟ್ರೀಯ ಗಾಳಿಪಟ ಉತ್ಸವದಲ್ಲಿ ಪಾಲ್ಗೊಳ್ಳುವರು. ಬಳಿಕ ಫೆಡ್ರಿಕ್ ಮೆರ್ಜ್ ಮಹಾತ್ಮ ಮಂದಿರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ನಿಯೋಗಮಟ್ಟದ ಮಾತುಕತೆ ನಡೆಸಲಿದ್ದಾರೆ.

ಭಾರತ ಸ್ವಾತಂತ್ರ್ಯ ಚಳವಳಿ ಹಾಗೂ ಮಹಾತ್ಮಾಗಾಂಧೀಜಿಯವರ ಜೀವನ-ಸಾಧನೆ ಸಾದರಪಡಿಸುವ ದಾಂಡಿ ಕುಟೀರಕ್ಕೂ ಪ್ರಧಾನಿ ಭೇಟಿ ನೀಡಲಿದ್ದಾರೆ.

ಎರಡನೇ ದಿನದಂದು ಚಾನ್ಸಲರ್ ಫೆಡ್ರಿಕ್ ಮೆರ್ಜ್, ಬೆಂಗಳೂರಿನ ಆಡುಗೋಡಿಯಲ್ಲಿರುವ ಭಾರತ-ಜರ್ಮನಿ ಸಹಯೋಗದ ಬಾಷ್ ಆವಿಷ್ಕಾರ ಮತ್ತು ತಯಾರಿಕಾ ಘಟಕಕ್ಕೆ ಭೇಟಿ ನೀಡಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

*****************

ಗುಜರಾತ್‌ನ ವಡೋದರಾದಲ್ಲಿ ನಡೆಯುತ್ತಿರುವ ಮೂರು ಏಕದಿನ ಸರಣಿಯ ಪುರುಷರ ಮೊದಲ ಕ್ರಿಕೆಟ್ ಪಂದ್ಯದಲ್ಲಿ ನ್ಯೂಜಿಲೆಂಡ್ ನೀಡಿದ ೩೦೧ ರನ್‌ಗಳ ಗೆಲುವಿನ ಗುರಿಯನ್ನು ಬೆನ್ನಟ್ಟಿದ ಆತಿಥೇಯ ಭಾರತ, ೨೫.೩ ಓವರ್‌ಗಳಲ್ಲಿ ೧ ವಿಕೆಟ್‌ಗೆ ೧೫೭ ರನ್ ಗಳಿಸಿ ಆಡುತ್ತಿದೆ.

ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ತಂಡ ನಿಗದಿತ ೫೦ ಓವರ್‌ಗಳಲ್ಲಿ ೮ ವಿಕೆಟ್‌ಗಳ ನಷ್ಟಕ್ಕೆ ೩೦೦ ರನ್ ಗಳಿಸಿತು. ನ್ಯೂಜಿಲೆಂಡ್ ಪರ, ಡ್ಯಾರಿಲ್ ಮಿಚೆಲ್ ೮೪ ರನ್‌ಗಳೊಂದಿಗೆ ಅತಿ ಹೆಚ್ಚು ಸ್ಕೋರರ್ ಆಗಿದ್ದರೆ, ಹೆನ್ರಿ ನಿಕೋಲ್ಸ್ ೬೨ ರನ್‌ಗಳ ಕೊಡುಗೆ ನೀಡಿದರು.

*****************

ನವಿ ಮುಂಬೈನ ಡಾ.ಡಿ.ವೈ.ಪಾಟೀಲ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿಂದು ನಡೆಯುತ್ತಿರುವ ಮಹಿಳಾ ಪ್ರೀಮಿಯರ್ ಲೀಗ್ - ಡಬ್ಲ್ಯೂಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯಾವಳಿಯ ೪ನೇ ಪಂದ್ಯದಲ್ಲಿ ಗುಜರಾತ್

ಜೈಂಟ್ಸ್ ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಮುಖಾಮುಖಿಯಾಗಿದ್ದು, ಟಾಸ್ ಗೆದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

********ಮುಕ್ತಾಯ*******